# ದಿನಾಂಕ: 16-02-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯ

## ವಿಷಯದ ಸಂಖ್ಯೆ : 323/2011-12

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರಾದ, ಡಾ|| ವೇದವ್ಯಾಸ ಶ್ರೀನಿವಾಸ ಆಚಾರ್ಯ ರವರು ದಿನಾಂಕ:14-02-2012 ರಂದು ದೈವಾಧೀನರಾಗಿರುವರೆಂದು ಸಭೆಗೆ ತಿಳಿಸಲು ತುಂಬಾ ದು:ಖವಾಗುತ್ತದೆ.

ದಿವಂಗತರು ಕರ್ನಾಟಕ ರಾಜ್ಯ ಸರ್ಕಾರದಲ್ಲಿ ವೈದ್ಯಕೀಯ ಶಿಕ್ಷಣ ಸಚಿವರಾಗಿ, ಮುಜರಾಯಿ ಸಚಿವರಾಗಿ ಹಾಗೂ ಗೃಹ ಸಚಿವರಾಗಿಯೂ ತಮ್ಮ ಸೇವೆಯನ್ನು ಸಲ್ಲಿಸಿದ್ದು, ರಾಜ್ಯವು ಅಭಿವೃದ್ಧಿ ಪಥದತ್ತ ಸಾಗಲು ಶ್ರಮಿಸಿರುತ್ತಾರೆ. ದಿವಂಗತರು ಉಡುಪಿ ಪುರಸಭಾ ಅಧ್ಯಕ್ಷರಾಗಿ, ವೈದ್ಯರಾಗಿ ಜನತೆಯ ಸೇವೆಯನ್ನು ಸಲ್ಲಿಸಿ, ಜನಾನುರಾಗಿಗಳಾಗಿದ್ದರು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸೆರೆ ವಾಸವನ್ನು ಸಹ ಅನುಭವಿಸಿದ್ದರು. ದಿವಂಗತರು ಸರಳ ಸಜ್ಜನಿಕೆಯ, ನಿಷ್ಠಾವಂತ ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಕರ್ನಾಟಕ ರಾಜ್ಯವು ಇಂದು ಧೀಮಂತ, ಜನಪ್ರತಿನಿಧಿ ಹಾಗೂ ಉತ್ತಮ ಆಡಳಿತಗಾರರನ್ನು ಕಳೆದುಕೊಂಡಂತಾಗಿದೆ.

ದಿವಂಗತರು ರಾಜ್ಯಕ್ಕೆ ಸಲ್ಲಿಸಿರುವ ಅಪಾರ ಸೇವೆಯನ್ನು ಇಂದು ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರಾದ, ಡಾ|| ವೇದವ್ಯಾಸ ಶ್ರೀನಿವಾಸ ಆಚಾರ್ಯ ರವರು ದಿನಾಂಕ:14-02-2012 ರಂದು ದೈವಾಧೀನರಾಗಿರುವರೆಂದು ಸಭೆಗೆ ತಿಳಿಸಲು ತುಂಬಾ ದು:ಖವಾಗುತ್ತದೆ.

ದಿವಂಗತರು ಕರ್ನಾಟಕ ರಾಜ್ಯ ಸರ್ಕಾರದಲ್ಲಿ ವೈದ್ಯಕೀಯ ಶಿಕ್ಷಣ ಸಚಿವರಾಗಿ, ಮುಜರಾಯಿ ಸಚಿವರಾಗಿ ಹಾಗೂ ಗೃಹ ಸಚಿವರಾಗಿಯೂ ತಮ್ಮ ಸೇವೆಯನ್ನು ಸಲ್ಲಿಸಿದ್ದು, ರಾಜ್ಯವು ಅಭಿವೃದ್ಧಿ ಪಥದತ್ತ ಸಾಗಲು ಶ್ರಮಿಸಿರುತ್ತಾರೆ. ದಿವಂಗತರು ಉಡುಪಿ ಪುರಸಭಾ ಅಧ್ಯಕ್ಷರಾಗಿ, ವೈದ್ಯರಾಗಿ ಜನತೆಯ ಸೇವೆಯನ್ನು ಸಲ್ಲಿಸಿ, ಜನಾನುರಾಗಿಗಳಾಗಿದ್ದರು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸೆರೆ ವಾಸವನ್ನು ಸಹ ಅನುಭವಿಸಿದ್ದರು. ದಿವಂಗತರು ಸರಳ ಸಜ್ಜನಿಕೆಯ, ನಿಷ್ಠಾವಂತ ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಕರ್ನಾಟಕ ರಾಜ್ಯವು ಇಂದು ಧೀಮಂತ, ಜನಪ್ರತಿನಿಧಿ ಹಾಗೂ ಉತ್ತಮ ಆಡಳಿತಗಾರರನ್ನು ಕಳೆದುಕೊಂಡಂತಾಗಿದೆ.

ದಿವಂಗತರು ರಾಜ್ಯಕ್ಕೆ ಸಲ್ಲಿಸಿರುವ ಅಪಾರ ಸೇವೆಯನ್ನು ಇಂದು ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಈ ಸಭೆಯು ಪ್ರಾರ್ಥಿಸುತ್ತದೆ".

ಶಾರದಮ್ಮ
(ಶಾರದಮ್ಮ)
ಮಹಾಪೌರರು

**ದಿನಾಂಕ: 16-02-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯ**

**ವಿಷಯದ ಸಂಖ್ಯೆ : 324/2011-12**

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಕನ್ನಡ ಚಲನಚಿತ್ರ ಕಲಾವಿದರಾದ, ಶ್ರೀ. ಕರಿಬಸವಯ್ಯ ರವರು ದಿನಾಂಕ:03-02-2012 ರಂದು ದೈವಾಧೀನರಾದರೆಂದು ತಿಳಿಸಲು ದು:ಖವಾಗುತ್ತದೆ. ದಿವಂಗತರು ರಂಗಭೂಮಿ ಕಲಾವಿದರಾಗಿ, ಚಲನಚಿತ್ರ ರಂಗದಲ್ಲಿ ಹಾಸ್ಯ ನಟರಾಗಿ ತಮ್ಮ ನಟನಾ ಚಾತುರ್ಯದಿಂದ ಜನಮನ ಗೆದ್ದಿದ್ದರು. ದಿವಂಗತರು ಸುಮಾರು 200ಕ್ಕೂ ಹೆಚ್ಚು ಚಿತ್ರಗಳಲ್ಲಿ ಪೋಷಕ ನಟರಾಗಿ ತಮ್ಮ ಅಭಿನಯ ಕೌಶಲ್ಯವನ್ನು ತೋರಿದ್ದರು.

ದಿವಂಗತರ ಅಗಲಿಕೆಯಿಂದಾಗಿ ಕನ್ನಡ ಚಿತ್ರಗಂಗವು ಒಬ್ಬ ಹಾಸ್ಯ ನಟರನ್ನು ಕಳೆದುಕೊಂಡಂತಾಗಿದ್ದು, ದಿವಂಗತರು ಚಲನಚಿತ್ರ ರಂಗದಲ್ಲಿ ಸಲ್ಲಿಸಿರುವ ಸೇವೆಯನ್ನು ಇಂದು ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಹಾಗೂ ಮೃತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

**ನಿರ್ಣಯ:** "ಕನ್ನಡ ಚಲನಚಿತ್ರ ಕಲಾವಿದರಾದ, ಶ್ರೀ. ಕರಿಬಸವಯ್ಯ ರವರು ದಿನಾಂಕ:03-02-2012 ರಂದು ದೈವಾಧೀನರಾದರೆಂದು ತಿಳಿಸಲು ದು:ಖವಾಗುತ್ತದೆ. ದಿವಂಗತರು ರಂಗಭೂಮಿ ಕಲಾವಿದರಾಗಿ, ಚಲನಚಿತ್ರ ರಂಗದಲ್ಲಿ ಹಾಸ್ಯ ನಟರಾಗಿ ತಮ್ಮ ನಟನಾ ಚಾತುರ್ಯದಿಂದ ಜನಮನ ಗೆದ್ದಿದ್ದರು. ದಿವಂಗತರು ಸುಮಾರು 200ಕ್ಕೂ ಹೆಚ್ಚು ಚಿತ್ರಗಳಲ್ಲಿ ಪೋಷಕ ನಟರಾಗಿ ತಮ್ಮ ಅಭಿನಯ ಕೌಶಲ್ಯವನ್ನು ತೋರಿದ್ದರು.

ದಿವಂಗತರ ಅಗಲಿಕೆಯಿಂದಾಗಿ ಕನ್ನಡ ಚಿತ್ರಗಂಗವು ಒಬ್ಬ ಹಾಸ್ಯ ನಟರನ್ನು ಕಳೆದುಕೊಂಡಂತಾಗಿದ್ದು, ದಿವಂಗತರು ಚಲನಚಿತ್ರ ರಂಗದಲ್ಲಿ ಸಲ್ಲಿಸಿರುವ ಸೇವೆಯನ್ನು ಇಂದು ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಹಾಗೂ ಮೃತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಈ ಸಭೆಯು ಪ್ರಾರ್ಥಿಸುತ್ತದೆ".

(ಶಾರದಮ್ಮ)
ಮಹಾಪೌರರು